ಶ್ರೀ ಬಿ. ಪ್ರಕಾಶ್ (ಹುಕ್ಕೇರಿ) : ಬಾಂಬೆಗೆ ಹೋಗುತ್ತೇವೆ ಒಪ್ಪಂದ ಮಾಡಿಕೊಳ್ಳುತ್ತೇವೆಂದರೆ ಇದುವರೆಗೆ ಆ ನಿರ್ಣಯ ಆಗಿಲ್ಲ ಆ ನಿರ್ಣಯವನ್ನು ತಾವು ಮಾಡಬೇಕು. ಪ್ರತಿ ಸಲ ಪ್ರಶ್ನೆ ಕೇಳುವುದು ಸರ್ಕಾರ ಉತ್ತರ ಕೊಡುವುದು ಆ ತರಹ ಆಗಬಾರದು. ಯಾವುದಾದರೂ ಒಂದು ನಿಲುವು ಹೇಳಬೇಕು. ಯಾವಾಗ ಮಹಾರಾಷ್ಟ್ರಕ್ಕೆ ಹೋಗುತ್ತಾರೆ ಮಹಾರಾಷ್ಟ್ರದ ಮಂತ್ರಿಗಳ ಜೊತೆಯಲ್ಲಿ ಯಾವಾಗ ಮೀಟಿಂಗ್ ಮಾಡುತ್ತಾರೆ, ಪರಿಹಾರವನ್ನು ಯಾವಾಗ ಮಾಡುತ್ತಾರೆಂದು ಕೂಡಲೇ ಹೇಳಬೇಕು. ಶಾಶ್ವತ ಪರಿಹಾರ ಆಗಬೇಕು.

ಉಪಾಧ್ಯಕ್ಷರು : ಚರ್ಚೆ ಬೇಡ ಇದನ್ನು ಇನ್ನೊಮ್ಮೆ ತೆಗೆದುಕೊಳ್ಳೋಣ ಇದರಲ್ಲಿ ಕ್ಲಾರಿಫಿಕೇಷನ್ ಬೇಡ. ಒಂದೊಂದು ನಿಮಿಷ ಒಬ್ಬರು ತೆಗೆದುಕೊಳ್ಳಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ಬಹಳ ಮುಖ್ಯವಾದ ಸಮಸ್ಯೆಗಳಿವೆ. ಮುಖ್ಯವಾದ ಸಮಸ್ಯೆಗಳು ಇರುವುದರಿಂದ ಅವರು ಸ್ಪಷ್ಟವಾದ ನಿಲುವನ್ನು ಅವರು ಹೇಳಬೇಕಾಗುತ್ತದೆ. ಶಾಶ್ವತ ಪರಿಹಾರ ಯಾವಾಗ ಕೊಡುತ್ತಾರೆಂದು ಅವರು ಹೇಳಬೇಕು.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ನಮಗೆ ಅವರಿಗೆ ಅಗ್ರಿಮೆಂಟ್ ಆಗಬೇಕು. ಅಗ್ರಿಮೆಂಟನ್ನು ನಾವು ಡ್ರಾಫ್ಟ್‌ಮಾಡಿ ಅವರಿಗೆ ಕಳುಹಿಸಿ ಕೊಟ್ಟಿದ್ದೆವು. ಆ ಡ್ರಾಫ್ಟನ್ನು ಮತ್ತೆ ಮಾಡಿಫಿಕೇಷನ್ ಮಾಡಿ ಮಹಾರಾಷ್ಟ್ರ ಗೌರ್ನಮೆಂಟ್‌ನವರು ನಮಗೆ ಕೊಟ್ಟರು. ಅದನ್ನು ಮಂತ್ರಿ ಮಂಡಲದ ಸಭೆಯಲ್ಲಿಟ್ಟು ಡ್ರಾಫ್ಟ್‌ನ್ನು ರೆಡಿ ಮಾಡಿ ಅವರಿಗೆ ಕಳುಹಿಸಿ ಕೊಟ್ಟಿದ್ದೇವೆ. ಈಗಾಗಲೇ ಎರಡು ಸಾರಿ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಲಿಕ್ಕೆ ಟೈಮ್ ನಿಗದಿಯಾಗಿದ್ದು ಅದು ಮುಂದಕ್ಕೆ ಹೋಗಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ದೂದಗಂಗಾ ಯೋಜನೆಯ ಅಗ್ರಿಮೆಂಟ್ ಏನಿದೆ, ಆ ಅಗ್ರಿಮೆಂಟ್‌ಗೆ ಸಹಿ ಹಾಕಿದರೆ ವ್ಯವಹಾರ, ಮುಗಿಯತ್ತದೆ. ಈ ಸದನ ಮುಗಿದ ಕೂಡಲೇ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಹಾಗೂ ನಮ್ಮ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಒಂದು ಸಮಯವನ್ನು ನಿಗದಿ ಮಾಡಿ ಅಗ್ರಿಮೆಂಟ್ ಕೂಡಲೇ ಆಗುವಂತೆ ವ್ಯವಸ್ಥೆ ಮಾಡಲಾಗುವುದು.

(೫) ಹೇಮಾವತಿ ಜಲಾಶಯದ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾದ ಪ್ರದೇಶದವರಿಗೆ ಪರಿಹಾರ.

ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಭಾರಿ ನೀರಾವರಿ ಮಂತ್ರಿಗಳ ಗಮನಕ್ಕೆ ಕೆಲವು ವಿಚಾರಗಳನ್ನು ತಂದು ಪ್ರಸ್ತಾಪ ಮಾಡಬೇಕೆಂದು ನಾನು ನಿಂತಿದ್ದೇನೆ. ನಾವು ಹೇಮಾವತಿ ಜಲಾಶಯದ ಮೇಲ್ಗಡೆ ಬರತಕ್ಕವರು. ಮುಳುಗಡೆ ಪ್ರದೇಶದಲ್ಲಿ ಬರತಕ್ಕವರು. ನಾವು ಭೂಮಿ ಮನೆ ಮಠ ಎಲ್ಲವನ್ನೂ ಕಳೆದುಕೊಂಡಿದ್ದೇವೆ.

ಶ್ರೀ ಕೆ. ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಶಿವಪ್ಪನವರು ಹೇಳತಕ್ಕ ವಿಚಾರ ಕಂದಾಯ ಮಂತ್ರಿಗಳಿಗೆ ಬರುತ್ತದೆ. ನಮ್ಮದು ದುಡ್ಡು ಕೊಡುವುದು ಅಷ್ಟೆ.

ಶ್ರೀ ಬಿ. ಬಿ. ಶಿವಪ್ಪ : ರಿಹ್ಯಾಬಿಲಿಟೇಷನ್ ಮತ್ತು ನಿಮ್ಮ ದರ ಇದೆಯಲ್ಲಾ ದುಡ್ಡಿನ ಬಗ್ಗೆ ಸ್ವಲ್ಪ ಮಾತನಾಡುತ್ತೇನೆ. ಮುಳುಗಡೆ ಪ್ರದೇಶದವರು ಸಹಸ್ರಾರು ವರ್ಷಗಳಿಂದ ಬದುಕುತ್ತಿದ್ದ ಜನ ನಾವು. ಉಪಕಾರಕ್ಕೋಸ್ಕರ ನಾವು ನಮ್ಮ ಸರ್ವಸ್ವವನ್ನು ಕಳೆದುಕೊಂಡು ಹೊರಗೆ ಬಂದಿದ್ದೇವೆ. ಆದರೆ ನಮಗೆ ಕೊಡಬೇಕಾದ ಪರಿಹಾರವನ್ನು ಸರಿಯಾದ ರೀತಿಯಲ್ಲಿ ಕೊಡಲಿಲ್ಲ. ಅದು ಕಂದಾಯ

ಮಂತ್ರಿಗಳಿಗೆ ಬರಲಿ ಅಥವಾ ಇರಿಗೇಷನ್ ಮಂತ್ರಿಗಳಿಗೆ ಬರಲಿ ನಾವು ಕೇಳತಕ್ಕದ್ದು ಕರ್ನಾಟಕ ಸರ್ಕಾರವನ್ನು. ಸರ್ಕಾರ ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ಸುಮಾರು 17 ಹಳ್ಳಿಗಳು ಸತತವಾಗಿ ಹತ್ತು ಹನ್ನೆರಡು ವರ್ಷಗಳಿಂದ ಈ ವ್ಯಾಜ್ಯಬಿದ್ದಿದೆ. ಮುಳುಗಡೆ ಪ್ರದೇಶ ಹೇಮಾವತಿಯ ಬಾರ್ಡರ್‌ನಲ್ಲಿ ನೀರು ಎಲ್ಲಿಗೆ ಬಂದು ನಿಲ್ಲುತ್ತದೊ ಅಲ್ಲಿಗೆ ಬರುತ್ತದೆ. ಇದನ್ನು ಸ್ಥಳಾಂತರಿಸಬೇಕು ಇದಕ್ಕೆ ಬೇರೆ ಪುನರ್‌ವಸತಿ ಕಲ್ಪಿಸಬೇಕು ಎಂದು ಸರ್ಕಾರ ತೀರ್ಮಾನ ತೆಗೆದುಕೊಂಡು, ವ್ಯವಹಾರ ನಡೆದು ದಿನಾಂಕ 16-3-99ರಲ್ಲಿ ಕೊನೆಗೆ ಒಂದು ತೀರ್ಮಾನ ತೆಗೆದುಕೊಂಡು ಒಂದು ಪತ್ರವನ್ನು ಸರ್ಕಾರದ ಕಾರ್ಯದರ್ಶಿಯವರಿಗೆ ಬರೆಯುತ್ತಾರೆ. ಅಲ್ಲಿನ ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಕಾರ್ಯದರ್ಶಿಯವರಿಗೆ ಒಂದು ಪತ್ರ ಬರೆಯುತ್ತಾರೆ. ಏನು ಪತ್ರ ಬರೆಯುತ್ತಾರೆಂದರೆ, "ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಿವೇದಿಸುವುದೇನೆಂದರೆ, ಉಲ್ಲೇಖ ಪತ್ರದಲ್ಲಿ ಮೇಲಿನ 17 ಗ್ರಾಮಗಳನ್ನು ಸ್ಥಳಾಂತರಿಸಲು ಸೂಕ್ತ ಆದೇಶ ನೀಡಬೇಕೆಂದು ಕೋರಿದ್ದು, ಈ ಕೆಲಸಕ್ಕೆ ತಗಲುವ ವೆಚ್ಚವನ್ನು ಭರಿಸಲು 1998-99ನೇ ಸಾಲಿನ ಲೆಕ್ಕ ಶೀರ್ಷಿಕೆ 4701 ಹೇಮಾವತಿ ಜಲಾಶಯದಲ್ಲಿ 25ಕೋಟಿ ರೂಪಾಯಿಗಳನ್ನು ಅಳವಡಿಸಿರುವುದಾಗಿ ತಿಳಿಸಲಾಗಿತ್ತು. 1998-99ನೇ ಸಾಲು ಮುಗಿಯುತ್ತಿರುವುದರಿಂದ ಮೇಲಿನ ಕಾಮಗಾರಿಯನ್ನು 1999-2000ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಬೇಕಾಗಿ ಕೋರುತ್ತೇನೆ." ಎಂದು ಹೇಳಿ ಮುಖ್ಯ ಇಂಜಿನಿಯರ್‌ರವರು ಕಾರ್ಯದರ್ಶಿಯವರಿಗೆ ಪತ್ರ ಬರೆಯುತ್ತಾರೆ. ಅದರ ಬಗ್ಗೆ ಏನಾಯಿತೋ ಗೋತ್ತಾಗಲಿಲ್ಲ. ಅದು ಇದುವರೆಗೆ ಪ್ರಸ್ತಾಪವಾಗಲಿಲ್ಲ. ಮಳೆ ಬಂದಾಗ ಹೇಮಾವತಿಯ ಜಲಾಶಯ ಭರ್ತಿಯಾದಾಗ, ಆ ಊರಿನ ಜನರ ಗೋಳು ನೋಡುವುದಕ್ಕಾಗುವುದಿಲ್ಲ. ಅದು ಸಂಪೂರ್ಣ ನನ್ನ ಕ್ಷೇತ್ರದಲ್ಲಿ ಬರುತ್ತದೆ. ಸಂಪೂರ್ಣವಾಗಿ ಮುಳುಗಡೆಯಾಗಿರತಕ್ಕವರಿಗೆ ಪೂರ್ತಿಹಣ ಕೊಡಲಿಲ್ಲ. ಮತ್ತೆ ಇವರು ಯಾರಿಗೆ ಹಣ ಕೊಟ್ಟರು? ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ 1-3-96ರಲ್ಲಿ ನಾನು ದೇವೇಗೌಡರ ಹತ್ತಿರ ಪ್ರಸ್ತಾಪ ಮಾಡಿ ಈ ರೀತಿಯ ತೊಂದರೆಗೆ ಆ ಜನರು ಸಿಕ್ಕಿದ್ದಾರೆ, ಮುಳುಗಡೆಯಾದ ಪ್ರದೇಶವೆಂದು ಯಾವಾಗ ಡಿಕ್ಲೇರ್ ಮಾಡಿದ್ದಾರೆ ಆಗಿನಿಂದ ಅವರಿಗೆ ರಸ್ತೆಯಿಲ್ಲ, ಕುಡಿಯುವ ನೀರಿನ ವ್ಯವಸ್ಥೆಯಿಲ್ಲ ಏನೇನೂ ವ್ಯವಸ್ಥೆಯಿಲ್ಲ. ಒಂದು ರೀತಿ ಕಾಡು ಜನರ ರೀತಿಯಲ್ಲಿ ವಾಸ ಇವರದು. ನಾನು ಮುಖ್ಯಮಂತ್ರಿಗಳನ್ನು ಕಂಡಾಗ ಮುಖ್ಯಮಂತ್ರಿಗಳು ಈ ಕೆಲಸವನ್ನು ಈ ಸಾಲಿನಲ್ಲಿಯೇ ಕೈ ಗೆತ್ತಿಕೊಂಡು ಕಾಮಗಾರಿಯನ್ನು ಪೂರೈಸುವುದೆಂದು ಒಂದು ಆದೇಶವನ್ನು ಕೊಡುತ್ತಾರೆ. 1996ರಲ್ಲಿ ಆ ರೀತಿ ಆದೇಶ ಕೊಡುತ್ತಾರೆ. ಅದಾದ ನಂತರ ಮಾನ್ಯ ಮುಖ್ಯಮಂತ್ರಿಗಳ ಆದೇಶ ಹೋದರೂ ಕೂಡ 16-3-98ರವರೆಗೆ ಏನೂ ಕೆಲಸ ಆಗಲಿಲ್ಲ. ಪುನಃ ನಾನು ಮಾನ್ಯ ನಾಗೇಗೌಡರಲ್ಲಿ ಪ್ರಸ್ತಾಪ ಮಾಡಿದೆ. ಏನು ಮಾನ್ಯಮುಖ್ಯಮಂತ್ರಿಗಳು ಆದೇಶ ಕೊಟ್ಟರು ಅದು ಏನಾಯಿತು ಆ ಕೆಲಸ ತೆಗೆದುಕೊಳ್ಳುತ್ತಿಲ್ಲ. ತಾವು ಆ ಕಡೆಗೆ ಹೋಗಿ ಜನರ ಕಷ್ಟಗಳನ್ನು ನೋಡಬೇಕೆಂದು ನಾನು ಅನೇಕಸಾರಿ ಅವರನ್ನು ಕೇಳಿಕೊಂಡೆ,16-3-98ರಲ್ಲಿ ಮಾನ್ಯ ನಾಗೇಗೌಡರು ಒಂದು ಪತ್ರ ಬರೆಯುತ್ತಾರೆ. ಸರ್ಕಾರದ ಕೆಲಸ ಯಾವ ರೀತಿ ಆಗುತ್ತದೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮುಖ್ಯ ಅಭಿಯಂತರರು, ಹೇಮಾವತಿ ಯೋಜನೆ, ಗೊರೂರು ಈ ಕೂಡ ಲಗತ್ತಿಸಿರುವ ರಸ್ತೆಗಳನ್ನು ಈ ಸಾಲಿನಲ್ಲಿಯೇ ಕೈಗೆತ್ತಿಕೊಂಡು ಮುಗಿಸುವುದು. ದಿನಾಂಕ 17-3-98ರಲ್ಲಿ ಪತ್ರ ಬರೆಯುತ್ತಾರೆ.

ನಾಗೇಗೌಡರು ಅದರ ಮೇಲೆ ಬರೆದರು ಆದ್ಯತೆಯ ಮೇಲೆ ಈ ಕೆಳಕಂಡ ಕೆಲಸಗಳನ್ನು ಈ ಸಾಲಿನಲ್ಲಿಯೇ ಕೈಗೊಂಡು ವರದಿಮಾಡಿ. 20-3-98ರಲ್ಲಿ ಇವರಿಗೆ ಪತ್ರ ಬರೆಯುತ್ತಾರೆ. ನಾಗೇಗೌಡರು ಬರೆದರೂ ಅದು ಆಗಲಿಲ್ಲ. ಆದಾದ ನಂತರ 30-3-98ರಲ್ಲಿ ಕಾರ್ಯದರ್ಶಿಗಳಾದ ಶಿವಶಂಕರ್‌ರವರು ಅವರೊಂದು ಪತ್ರವನ್ನು ಅವರಿಗೆ ಬರೆಯುತ್ತಾರೆ. ಏಕೆ ಈ ಕೆಲಸ ಡಿಲೇ ಆಗಿದೆ ಕೈಗೆತ್ತಿಕೊಳ್ಳಿಯೆಂದು. ಆದಾದ ನಂತರ 31-3-98ರಂದು ಅಲ್ಲಿನ ಮುಖ್ಯ ಇಂಜಿನಿಯರ್‌ರವರು ಕೆಲವು ಕೆಲಸಗಳನ್ನು ಕೈಗೆತ್ತಿಕೊಳ್ಳುತ್ತಾರೆ. ಅವರು ಕೆಲಸವನ್ನು ಮಾಡಬೇಕೆಂದು ಹೊರಟಂತಹ ಸಂದರ್ಭದಲ್ಲಿ ಅವರು ನಿವೃತ್ತರಾಗುತ್ತಾರೆ. ಅವರ ಬದಲಿಗೆ ಬಂದಂತಹ ಮುಖ್ಯ ಇಂಜಿನಿಯರ್‌ರವರು ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕೆಂದು ತೀರ್ಮಾನ ಮಾಡುತ್ತಾರೆ.

ಉಪಾಧ್ಯಕ್ಷರು : ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಇದೆಲ್ಲ ಹೇಳುವುದಕ್ಕಾಗುವುದಿಲ್ಲ 'ತಾವು ಬೇಡಿಕೆಗಳ ಮೇಲೆ ಚರ್ಚೆ ಬಂದಾಗ ಮಾತನಾಡಿ.

ಶ್ರೀ ಬಿ. ಬಿ. ಶಿವಪ್ಪ : ನನಗೆ ಬೇರೆ ಅವಕಾಶ ಸಿಗಲಿಲ್ಲ. ಅದಕ್ಕೋಸ್ಕರ ಸಮಯ ತೆಗೆದುಕೊಂಡಿದ್ದೇನೆ. ಇದು ಬಹಳ ಮುಖ್ಯವಾದುದು ಇದೆ. ನಾವು ಮುಳುಗಡೆಯಾಗಿರತಕ್ಕ ಪ್ರದೇಶದಿಂದ ಬಂದಿರತಕ್ಕವರು. ನಾವು ಮುಳುಗಿ ಹೋಗಿಬಿಟ್ಟಿದ್ದೇವೆ. ನಾಲೆ ಯಾವ ಕಡೆಗೆ ಹೋಗುತ್ತಿದೆ ಅವರು ಅನುಕೂಲ ಪಡೆದುಕೊಳ್ಳುತ್ತಿದ್ದಾರೆ. ಅವರು ಸುಖವಾಗಿದ್ದಾರೆ. ಅವರಿಗೆ ಎಲ್ಲಾ ಕೆಲಸವಾಗುತ್ತಿದೆ. ಗೊರೂರು ಅಣೆಕಟ್ಟಿಗೆ ಹೋದಂತಹ ಹಣ ಎಲ್ಲಿಯೋ ಹೋಗುತ್ತಿದೆ. ನೀರು ಯಾವ ರೀತಿ ಹರಿಯುತ್ತಿದೆಯೋ ಆ ರೀತಿ ಹರಿದು ಹೋಗುತ್ತಿದೆ. ಅದರಿಂದ ನನಗೆ ಸ್ವಲ್ಪ ಸಮಯ ಕೊಡಬೇಕಾಗುತ್ತದೆ. ಹಣ ಸಾಲುವುದಿಲ್ಲ ನಮಗೆ ಹೆಚ್ಚು ಹಣ ಕೊಡಿಸಬೇಕೆಂದು ಮುಖ್ಯ ಇಂಜಿನಿಯರ್ ಕೇಳುತ್ತಾರೆ. 50 ಲಕ್ಷ ರೂ. ಬಿಡುಗಡೆ ಮಾಡಿದ್ದಾರೆ. ಕೊನೆಯ ಪಕ್ಷ ನಮಗೆ ಒಂದು ಕೋಟಿಯಾದರೂ ನಮಗೆ ಬಿಡುಗಡೆ ಮಾಡಿಸಿಕೊಟ್ಟರೆ ನಾವು ಈ ಕೆಲಸ ಕೈಗೆತ್ತಿಕೊಳ್ಳುತ್ತೇವೆಂದು ಹೇಳುತ್ತಾರೆ. ನಾನು ಇದರ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಪ್ರಸ್ತಾಪ ಮಾಡಿ, ನಾನು 2ಕೋಟಿ ಕೇಳಿದರೆ ಅವರು ಒಂದು ಕೋಟಿಯನ್ನಾದರೂ ಕೊಡಬಹುದು ಎನ್ನುವ ದೃಷ್ಟಿಯಿಂದ ನಮಗೆ ಎರಡು ಕೋಟಿ ಬಿಡುಗಡೆ ಮಾಡಿಕೊಡಿ ಇದು 1996ನೇ ಇಸವಿಯಿಂದ ಕೆಲಸ ಬಾಕಿ ಉಳಿದಿದೆಯೆಂದು ಹೇಳಿದಾಗ ಮಾನ್ಯ ನಾಗೇಗೌಡರು ಎರಡು ಕೋಟಿ ರೂಗಳನ್ನು ಬಿಡುಗಡೆ ಮಾಡಿಕೊಟ್ಟರು. ಎರಡು ಕೋಟಿ ರೂ. ಬಿಡುಗಡೆ ಮಾಡುವಂತಹ ಸಂದರ್ಭದಲ್ಲಿ ಅವರೊಂದು ಪತ್ರವನ್ನು ಇಂಜಿನಿಯರ್‌ರವರಿಗೆ ಬರೆದರು. ಅವರ ಕಾರ್ಯದರ್ಶಿಗಳು ಅವರಿಗೆ ತಿಳಿಸುತ್ತಾರೆ. ದಯಾಶಂಕರ್ ಎನ್ನುವವರು ಸಹಿ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಬಿ. ಬಿ. ಶಿವಪ್ಪನವರು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಿಗೆ ಬರೆದಿದ್ದ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ ಸದರಿ ಪತ್ರದಲ್ಲಿ ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಆದೇಶಿಸಿರುವಂತೆ ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳ ಪುನರ್ವಸತಿ ಕಾಮಗಾರಿಗಳಿಗೆ 1998 - 99ನೇ ಸಾಲಿನಲ್ಲಿ ಅನುದಾನವನ್ನು ಒದಗಿಸಿಕೊಂಡು ಕಾಮಗಾರಿಗಳನ್ನು ಕೈಗೊಳ್ಳುವುದು ಎಂದು ಬರೆಯುತ್ತಾರೆ. ಇನ್ನೂ ಕೆಲಸವಾಗಿಲ್ಲ. ಇಷ್ಟೆಲ್ಲಾ ಆದರೂ ಕೂಡ ಇಮತ್ತಿನ ಮುಖ್ಯ ಮಂತ್ರಿಗಳೂ ಕೂಡ ಪತ್ರ ಬರೆಯುತ್ತಾರೆ. ಈ ಕೆಲಸಗಳನ್ನು

ತಕ್ಷಣ ಕೈಗೆತ್ತಿಕೊಂಡು ಪೂರ್ತಿಮಾಡಿಯೆಂದು 16-3-98ರಲ್ಲಿ ಮುಖ್ಯಮಂತ್ರಿಗಳ ಕಛೇರಿಯಿಂದ ಒಂದು ಪತ್ರ ಹೋಗುತ್ತದೆ. ಮಾನ್ಯ ಶಾಸಕರ ಕ್ಷೇತ್ರದ ಆಲೂರು ಮತ್ತು ಸಕಲೇಶಪುರ ತಾಲ್ಲೂಕಿನ ಕೆಲವು ಗ್ರಾಮಗಳು ಹೇಮಾವತಿ ಅಣೆಕಟ್ಟಿನಲ್ಲಿ ಮುಳುಗಡೆಯಾಗಿದ್ದು ಅಲ್ಲಿನ ಗ್ರಾಮಸ್ಥರು ಮನೆ ಜಮೀನು ಕಳೆದುಕೊಂಡು ನಿರ್ವಸತಿಕರಾಗಿದ್ದು ಇವರಿಗೆ ಯಾವುದೇ ರೀತಿಯ ಪುನರ್ವಸತಿ ಕಾಮಗಾರಿಗಳು ಆಗದಿರುವುದರಿಂದ ಕೊನೆಯ ಪಕ್ಷ ರಸ್ತೆ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನಾದರೂ ಮಾಡಿಸಿಕೊಡಿಯೆಂದು ಹೇಳಿ ಇವತ್ತಿನ ಮುಖ್ಯಮಂತ್ರಿಯವರು ಬರೆಯುತ್ತಾರೆ. ಇವತ್ತಿನವರೆಗೂ ಆಗಿಲ್ಲ. ಸ್ವಾಮಿ ಇಷ್ಟೆಲ್ಲಾ ಪ್ರಯತ್ನ ನಾವು ಮಾಡಿದ್ದೇವೆ. ಹಣ ಕೇಳಿದ್ದಾರೆ, ಯಾರ್ಯಾರಿಂದ ಪತ್ರ ಬೇಕೋ ಅದನ್ನು ಮಾಡಿದ್ದೇವೆ. ಮಾನ್ಯ ಮಂತ್ರಿಗಳೂ ಕೂಡ ಇದಕ್ಕೆ ಸಾಕಷ್ಟು ಒತ್ತಾಸೆ ಕೊಟ್ಟಿದ್ದಾರೆ. ಆದರೂ ಕೆಲಸ ಆಗುತ್ತಿಲ್ಲ. ಕೊನೆಗೆ ಕೊನೇ ಹಂತದಲ್ಲಿ ನನಗೊಂದು ಪತ್ರ ಬರುತ್ತದೆ. ಸರ್ಕಾರದ ಯಾವುದೋ ಒಂದು ಆದೇಶವನ್ನು ಉಲ್ಲೇಖ ಮಾಡಿ 'ಯಾವುದೇ ಕಾಮಗಾರಿಗಳನ್ನು ಈಗ ಕೈಗೊಳ್ಳುವುದಕ್ಕೆ ಸಾಧ್ಯವಿಲ್ಲ' ಎನ್ನುವಂಥ ಒಂದು ಪತ್ರ ಬರುತ್ತದೆ. ನಮಗೆ ಪತ್ರ ಆ ರೀತಿ ಬರೆಯುತ್ತಾರೆ 'ಯಾವುದೇ ಕೆಲಸ ಕೈಗೆತ್ತಿಕೊಳ್ಳುವುದಕ್ಕೆ ಆಗುವುದಿಲ್ಲ' ಎಂದು ಹೇಳಿ. ಇದು 5ನೇ ಮೇನಲ್ಲಿ ಪತ್ರ ಬರೆಯುತ್ತಾರೆ. ಮೇನಲ್ಲಿ ಪತ್ರ ಬರೆದು ಈಗ 99ನೇ ಇಸವಿಯಲ್ಲಿ ಈ ಕೆಲಸ ಪೂರ್ತಿ ಮುಗಿದಿದೆ. ಮುಳುಗಡೆಯಾಗಿರತಕ್ಕಂಥ ಜಾಗದ ಕೆಲಸ ಪೂರ್ತಿ ಮುಗಿದಿದೆ. ಮಾನ್ಯ ಮಂತ್ರಿಗಳು, ಮುಖ್ಯಮಂತ್ರಿ ಇಬ್ಬರೂ ಬರೆದಿದ್ದಾರೆ. ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಬರೆದಿದ್ದಾರೆ. ಕಾರ್ಯದರ್ಶಿಗಳು ಬರೆದಿದ್ದಾರೆ. ಆದರೆ ಆಗಲಿಲ್ಲ. ಆದರೆ ಜನವರಿ 1ರಲ್ಲಿ ಒಂದು ಟೆಂಡರ್ ಕರೆಯುತ್ತಾರೆ. ಎಲ್ಲಿ ಮುಳುಗಡೆಯಾಗಿದೆ, ಅದರ ಕೆಳಗಡೆ ಇರುವ ಜಾಗದಲ್ಲಿ ಸುಮಾರು 75-80ಲಕ್ಷ ರೂಪಾಯಿಗಳ ಒಂದು ಟೆಂಡರ್ ಅನ್ನು ಕರೆಯುತ್ತಾರೆ.

ಉಪಾಧ್ಯಕ್ಷರು : ನೀವು ನೇರವಾಗಿ ಕೇಳಿ.

ಶ್ರೀ ಬಿ. ಬಿ. ಶಿವಪ್ಪ : ನನಗೆ ಉತ್ತರಬೇಕು. ಇಲ್ಲಿ ನಮಗೆ ಹಣ ಇಲ್ಲ, ಕೆಲಸ ಯಾವುದೂ ತೆಗೆದುಕೊಳ್ಳಬಾರದು ಎಂದು ಸರ್ಕಾರದ ಆದೇಶ ಇದೆಯೆಂದು ಹೇಳುತ್ತಾರೆ. ನಮಗೆ ಹಾಗೆ ಪತ್ರ ಬರೆಯುತ್ತಾರೆ, ಇಲ್ಲಿ ಟೆಂಡರ್ ಕೆರೆಯುತ್ತಾರೆ. ಟೆಂಡರ್ ಕರೆಯುವುದು ಸಂತೋಷ, ನಾವು ಅದನ್ನು ಬೇಡವೆಂದು ಹೇಳುವುದಿಲ್ಲ. ಆದರೆ ಯಾವುದಕ್ಕೆ ಟೆಂಡರ್ ಕರೆಯುತ್ತೀರಿ ನೀವು? ಸಮುದಾಯ ಭವನ, ದೇವಸ್ಥಾನಕ್ಕೆ ಟೆಂಡರ್ ಕರೆಯುವುದೇನು? ಅದಕ್ಕೆ ಮುನ್ನ ಈ 18 ಹಳ್ಳಿಗಳ ಮತ್ತು ಆದರಿಂದ ಮೇಲ್ಪಟ್ಟು ಮುಳುಗಡೆಯಾದ ಹಳ್ಳಿಗಳಿಗೆ ತಾವು ಕನಿಷ್ಠ ನೀರು, ರಸ್ತೆ ಮಾಡಿಕೊಡುವುದಕ್ಕೆ ಆಗಿಲ್ಲ. ಈ ಹಣವನ್ನು ಏಕೆ ವ್ಯಯ ಮಾಡತ್ತಿದ್ದೀರಿ? ಹೇಗೆ ವ್ಯಯ ಮಾಡುತ್ತೀರಿ? ಇದನ್ನು ನಾನು ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅಲ್ಲಿ ಒಬ್ಬರು ಮ್ಯಾನೇಜರ್ ಇದ್ದಾರೆ. ಅಣೆಕಟ್ಟಿಗೆ ಫೌಂಡೇಷನ್ ಕಲ್ಲು ಯಾವತ್ತು ಹಾಕಿದ್ದಾರೆ, ಅವತ್ತಿನಿಂದ ಇವತ್ತಿನವರೆಗೆ ಅವರೇ ಇದ್ದಾರೆ. ಅವರೇ ಚೀಫ್ ಇಂಜಿನಿಯರ್, ಅವರೇ ಇರಿಗೇಷನ್ ಮಿನಿಸ್ಟರ್, ಅವರೇ ಮುಖ್ಯಮಂತ್ರಿ. ಅವರು ಏನು ಆದೇಶ ಮಾಡುತ್ತಾರೆ, ಅದೇ ಕೆಲಸ ಆಗುತ್ತದೆ. ಇಷ್ಟೆಲ್ಲಾ ಪ್ರಯತ್ನ ಒಬ್ಬ ಶಾಸಕ ಮಾಡಿದರೂ ಕೂಡ ಈ ಕೆಲಸ ಆಗಲಿಲ್ಲ. ಸ್ವಾಮಿ, ನಾವೇಲ್ಲಾ ಮುಳುಗಡೆಯಾಗಿ ಸರ್ವಸ್ವವನ್ನೂ ಕಳೆದುಕೊಂಡಿರತಕ್ಕಂಥ ಜನ.

ಉಪಾಧ್ಯಕ್ಷರು : ನೇರವಾಗಿ ಕೇಳಿ

ಶ್ರೀ ಬಿ. ಬಿ. ಶಿವಪ್ಪ : ಇನ್ನೂ ಸರಿಯಾದ ವ್ಯವಸ್ಥೆಯಾಗಿಲ್ಲವೆಂದರೆ ಇನ್ನೇನು ಪ್ರಯತ್ನ ನಾವು ಮಾಡಬೇಕು? ದಯವಿಟ್ಟು ಮಂತ್ರಿಗಳು ಹೇಳಬೇಕು.

ಶ್ರೀ ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, ನಮ್ಮ ಹಿರಿಯ ಸದಸ್ಯರಾದ ಶ್ರೀ ಬಿ. ಬಿ. ಶಿವಪ್ಪನವರು ಏನು ಹೇಳಿದ್ದಾರೆ, ಸರ್ಕಾರದ ಆದೇಶವನ್ನು ನಾವು ಕೊಟ್ಟಿದ್ದು ನಿಜ. ಮುಖ್ಯಮಂತ್ರಿಗಳು ಬರೆದಿರುವುದು ನಿಜ. ಅದಕ್ಕೆ ಹಣವನ್ನು ನಾವು ಸೀಮಿತವಾಗಿ ಮಾಡಿರಲಿಲ್ಲ. ಈಗ ಹೋದ ಕ್ಯಾಬಿನೆಟ್‌ನಲ್ಲಿ ಹೇಮಾವತಿ ಜಲಾಶಯದಲ್ಲಿ ಮುಳುಗಡೆಯಾಗಿ ರತಕ್ಕಂಥ ಅಥವಾ ಸೀಪೇಜ್ ಇರತಕ್ಕಂಥ ಹಳ್ಳಿಗಳನ್ನು ಗುರುತಿಸಿ ಈ ವರ್ಷ 5 ಕೋಟಿ ರೂಪಾಯಿಗಳ ಕೆಲಸವನ್ನು ಮಾಡಬೇಕು ಎಂದು ಹೇಳಿ ಹೋದ ಬಜೆಟ್‌ನಲ್ಲಿ ಎನ್‌ಮಾರ್ಕ್ ಮಾಡಿದ್ದೇವೆ. ಆದ್ದರಿಂದ ಆ 5 ಕೋಟಿ ಜೊತೆಗೆ ನಮಗೆ ದುಡ್ಡು ಇರತಕ್ಕಂಥಾದ್ದರಲ್ಲಿ ನಮ್ಮ ನಾಲೆ ಕೆಲಸ ಎಲ್ಲಾ ಮಾಡಬೇಕಾಗಿರುವುದರಿಂದ ಒಂದು ಮೀಟಿಂಗ್ ಮಾಡಿ ಕೂಡಲೇ ಕಂದಾಯ ಮಂತ್ರಿಗಳು ನಾನು ಇಬ್ಬರೂ ಜಾಯಿಂಟ್ ಮೀಟಿಂಗ್ ಮಾಡಿ, ಮಾನ್ಯ ಶಿವಪ್ಪನವರನ್ನೂ ಕರಿಸಿ, ಅವರು ಹೇಳಿದ ಹಾಗೆ ಸಮುದಾಯ ಭವನ ಮಾಡುವುದು ಅಲ್ಲ. ಬಹಳ ಅವಶ್ಯಕವಾಗಿ ಪುನರ್ ವ್ಯವಸ್ಥೆ ಮಾಡತಕ್ಕಂಥ ಹಳ್ಳಿಗಳಿಗೆ ಮಾಡತಕ್ಕಂಥ ಕೆಲಸ ಯಾವುದು ಎಂದರೆ ರಸ್ತೆ ಮಾಡಿಕೊಡುವಂಥಾದ್ದು ಮತ್ತು ಕುಡಿಯುವ ನೀರು ಕೊಡತಕ್ಕಂಥಾದ್ದು. ಇವೆರಡಕ್ಕೆ ನಾವು ಬಹಳ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ. ಆದ್ದರಿಂದ ಅವರದ್ದೊಂದು ಮೀಟಿಂಗ್ ಕರೆಸಿ ಯಾವ್ಯಾವ ಹಳ್ಳಿಗಳು ಮುಳುಗಡೆಯಾಗಿದ್ದಾವೆ, ಎಲ್ಲಿ ಪರಿಹಾರ ಕೊಟ್ಟಿಲ್ಲ, ಎಲ್ಲಿ ಕೆಲಸ ಆಗಿಲ್ಲ, ಅದರ ಎಸ್ಟಿಮೇಟ್ ಏನಿದೆ, ನೋಡಿ ಅವರನ್ನು ಕೂರಿಸಿಕೊಂಡು, ನಾನು ಅಧಿಕಾರಿಗಳನ್ನೆಲ್ಲಾ ಕರೆಸಿ ಕೂತು ಮಾತನಾಡಿ ಎಷ್ಟು ನಮ್ಮ ಗ್ರಾಂಟ್ ಇದೆ, ಅಷ್ಟರೊಳಗೆ ಪ್ರತಿ ವರ್ಷ ಎಷ್ಟು ಮಾಡಬಹುದು, ಮುಂದಿನ ವರ್ಷ ಎಷ್ಟು ಮಾಡಬಹುದು ಎಂದು ನೋಡುತ್ತೇನೆ. ಇದು ನಿಧಾನವಾಗಿರುವುದಕ್ಕೆ ನಾನು ಕ್ಷಮೆ ಯಾಚಿಸುತ್ತೇನೆ. ಇದು 96-97ರಲ್ಲಿ ಆಗಿದೆ. ನೀವು ಎರಡು-ಮೂರು ಸಲ ನನಗೆ ಹೇಳಿದ್ದೀರಿ. ನಮ್ಮ ಇಲಾಖೆಯಿಂದ ತಪ್ಪಾಗಿದೆ. ನಾನು ಇದರ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳುತ್ತೇನೆ ಮತ್ತು ಇನ್ನು ಒಂದು ವಾರದಲ್ಲಿ ನಿಮಗೆ ಫಲಿತಾಂಶ ಕೊಡುತ್ತೇನೆ.

ಶ್ರೀ ಬಿ. ಬಿ. ಶಿವಪ್ಪ : ಕೆಲವು ಗ್ರಾಮಗಳನ್ನು ಕೈಗೊಳ್ಳುವ ವ್ಯವಸ್ಥೆ ಮಾಡಬೇಕು. ಕೂಡಲೇ ಇದನ್ನು ಕೈಗೆತ್ತಿಕೊಳ್ಳುವುದಕ್ಕೆ ಆದೇಶ ಕೊಡುತ್ತೀರಾ? ಇದಕ್ಕೋಸ್ಕರ ಈಗ ತಾವು ಕೊಟ್ಟಂಥ ಹಣ ಇದೆ. ಕೈಗೆತ್ತಿಕೊಳ್ಳುವುದಕ್ಕೆ ಅವರಿಗೆ ಹೇಳುತ್ತೀರಾ?

ಶ್ರೀ ಕೆ. ಎನ್. ನಾಗೇಗೌಡ : ನಾನು ಹೇಳುತ್ತೇನೆ. ಅದು ಬಹಳ ಜಿನ್ಯೆನ್ ಕೇಸ್ ಇದೆ. ಅದು ಸ್ವಲ್ಪ ನಮ್ಮ ಕಡೆಯಿಂದ ತಪ್ಪಾಗಿದೆ. ಅದಕ್ಕಾಗಿ ನಾನು ಅಕ್ಸೆಪ್ಟ್ ಮಾಡಿಕೊಂಡಿದ್ದೇನೆ. ನಾನು ಖಂಡಿತವಾಗಿಯೂ ಡೈರೆಕ್ಷನ್ ಕೊಡುತ್ತೇನೆ.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ಸೋಮವಾರಪೇಟೆ ಕೂಡ ಇದಕ್ಕೆ ಸಂಬಂಧ ಬರುತ್ತದೆ...

ಶ್ರೀ ಕೆ. ಎನ್. ನಾಗೇಗೌಡ : ಆಯಿತು

ಉಪಾಧ್ಯಕ್ಷರು : ನೀವು ಕುಳಿತುಕೊಳ್ಳಿ ಇದು ಈ ರೀತಿಯಾದರೆ ಸರಿಯಲ್ಲ. ಇದು ಹೀಗೇ ಆದರೆ ಶೂನ್ಯವೇಳೆಯಲ್ಲಿ ಪ್ರಶ್ನೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ನಮ್ಮನ್ನೂ ಕರೆಸಿ ಎಂದು ಹೇಳುತ್ತಿದ್ದೇನೆ.

ಶ್ರೀ ಕೆ. ಎನ್. ನಾಗೇಗೌಡ : ಕರೆಸುತ್ತೇನೆ ಎಂದು ಹೇಳಿದೆ.

ಉಪಾಧ್ಯಕ್ಷರು : ಆಯಿತು. ಈ ರೀತಿ ನೀವು ಒಂದು ಪ್ರಶ್ನೆಗೆ ಹತ್ತು ಹತ್ತು ನಿಮಿಷ ತೆಗೆದುಕೊಂಡರೆ ಹೇಗೆ?

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ಈ ಅಣೆಕಟ್ಟಿನಿಂದ ನಮ್ಮ ತಾಲ್ಲೂಕಿನಲ್ಲಿ ಇಡೀ ಕೊಡಗನ್ನು ಮುಳುಗಿಸಿಬಿಟ್ಟಿರಿ.

ಉಪಾಧ್ಯಕ್ಷರು : ಪ್ರಕಾಶ್ ಹುಕ್ಕೇರಿಯವರೇ, ನೀವು ಕೇಳಿ.

(ಈ) ಹಿಡಕಲ್ ಮತ್ತು ಘಟಪ್ರಭಾ ಯೋಜನೆಯಲ್ಲಿ ಭೂಮಿ ಕಳೆದು ಕೊಂಡವರಿಗೆ ಪರಿಹಾರ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸದಲಗಾ) : ಮಾನ್ಯ ಉಪಾಧ್ಯಕ್ಷರೇ, ಇದಕ್ಕೆ ಉತ್ತರ ಕೊಡುವುದಕ್ಕೆ ಕಂದಾಯ ಮಂತ್ರಿಗಳು ಇಲ್ಲ. ಅವರು ಬಂದಮೇಲೆ ಇದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ನಾವು ಹೇಳುತ್ತೇವೆ. ನೀವು ಕೇಳಿ.

ಶ್ರೀ ಪ್ರಾಕಾಶ್ ಬಾಬಣ್ಣ ಹುಕ್ಕೇರಿ : ನಮ್ಮ ಜಿಲ್ಲೆಯಲ್ಲಿ ಹಿಡಕಲ್ ಡ್ಯಾಮ್ ಆಗಲಿ, ಘಟಪ್ರಭಾ ಯೋಜನೆಯಾಗಲೀ, ಭೂಮಾಲೀಕರು ತಮ್ಮ ಜಮೀನನ್ನು ಹಿಡಕಲ್ ಡ್ಯಾಮ್ ಜಾರಿ ಮಾಡುವುದಕ್ಕೆಂದು ಕೊಟ್ಟಿದ್ದಾರೆ. ಆದರೆ ನಮ್ಮ ವಿಶೇಷ ಜಿಲ್ಲಾಧಿಕಾರಿಗಳು ರೈತರು ಏನು ಜಮೀನನ್ನು ಕಳೆದುಕೊಂಡಿದ್ದಾರೆ, ಅದಕ್ಕೆ ಅವರು ದುಡ್ಡು ಕೇಳಿದರೆ ನೀವು ಕೋರ್ಟಿಗೆ ಹೋಗಿ, ನ್ಯಾಯಾಲಯಕ್ಕೆ ಹೋಗಿ ಎಂದು ಹೇಳುತ್ತಾರೆ. ಹಾಗೆ ಅವರು ಹೋಗಿ ನ್ಯಾಯಾಲಯದಿಂದ ಆರ್ಡರ್ ಪಡೆದುಕೊಂಡರೂ ಕೂಡ ಇದುವರೆಗೂ ವಿಶೇಷ ಜಿಲ್ಲಾಧಿಕಾರಿಗಳು ಹಣ ಬಿಡುಗಡೆ ಮಾಡಿಲ್ಲ. ಮೊನ್ನೆ ಬೆಳಗಾಂ ಜಿಲ್ಲೆಯಲ್ಲಿ ಹುಕ್ಕೇರಿ ತಾಲ್ಲೂಕಿನಲ್ಲಿ ಒಂದು ಕೋರ್ಟಿನಿಂದ ಆದೇಶವನ್ನು ಪಡೆದುಕೊಂಡು ಆಫೀಸನ್ನು ಜಪ್ತಿ ಮಾಡುವಂಥ ಪರಿಸ್ಥಿತಿಯನ್ನು ತಂದರು. ಪ್ರತಿಸಾರಿ ವಿಶೇಷ ಜಿಲ್ಲಾಧಿಕಾರಿ ಆಫೀಸಿನವರು ಜಪ್ತಿಮಾಡಿ ಸಾಮಾನನ್ನೆಲ್ಲಾ ಹೊರಗೆ ತಂದಿಟ್ಟು ಅವಮಾನ ಮಾಡುವ ವ್ಯವಸ್ಥೆ ನಡೆಯುತ್ತದೆ. ಆದ್ದರಿಂದ ದಯವಿಟ್ಟು ಸರ್ಕಾರದವರು ಎಲ್ಲೆಲ್ಲಿ ಭೂಮಿಯನ್ನು ಕಳೆದುಕೊಂಡಿದ್ದಾರೆ, ಆ ಭೂಮಾಲೀಕರಿಗೆ ಹಣವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. 1976 ರಿಂದ ಸುಮಾರು 12 ಕೇಸ್‌ಗಳು ಹಿಡಕಲ್ ಡ್ಯಾಮ್‌ನಲ್ಲಿ ಇನ್ನೂ ಇತ್ಯರ್ಥವಾಗದೆ ಹಾಗೇ ಉಳಿದಿವೆ. ದಯವಿಟ್ಟು ಇದರ ಬಗ್ಗೆ ಸರ್ಕಾರ ಹೇಳಿಕೆ ನೀಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, ಹಿಡಕಲ್ ಡ್ಯಾಮ್‌ನಲ್ಲಿ 1976ರಲ್ಲಿ ಆಗಿರತಕ್ಕಂಥದ್ದಕ್ಕೆ ಭೂಪರಿಹಾರ ಕೊಡಬೇಕು ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು ಹೊಸ ಕಾಯಿದೆಯನ್ನು ಮಾಡಿದ್ದೇವೆ. ನಾವು ನೀರಾವರಿ ಇಲಾಖೆಯಿಂದ ಈ ಭೂಪರಿಹಾರ ಹಣ ಕೊಡತಕ್ಕಂಥ ಕೆಲಸ ಮಾಡಿರುವುದರಿಂದ ಕಾಂಟ್ರಾಕ್ಟ್